# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 501(505)
ಸದಸ್ಯರ ಹೆಸರು : ಡಾ.ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 21/02/2022.
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೆ.ಜಿ.ಎಫ್.,ನಲ್ಲಿರುವ ಬಿ.ಜಿ.ಎಂ.ಎಲ್. ಶಾಲೆಯು ಪ್ರಾರಂಭಗೊಂಡಿರುವುದು ಯಾವಾಗ; | ಕೆ.ಜಿ.ಎಫ್‌ನಲ್ಲಿರುವ ಬಿ.ಜಿ.ಎಂ.ಎಲ್. ಶಾಲೆಯು 1889ರಲ್ಲಿ ಪ್ರಾರಂಭಗೊಂಡಿರುತ್ತದೆ. |
| ಆ) | ಈ ಶಾಲೆಯ ಆಡಳಿತ ಮಂಡಳಿ ಯಾವುದು; | ಬಿ.ಜಿ.ಎಂ.ಎಲ್ ಶಿಕ್ಷಣ ಸಮಿತಿ ಸ್ವರ್ಣ ಭವನ, ಉರಿಗಾಂ, ಕೆ.ಜಿ.ಎಫ್. ಕೋಲಾರ ಜಿಲ್ಲೆ. |
| ಇ) | ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು; ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಹಾಗೂ ಶಾಲೆಯ ವಿಸ್ತೀರ್ಣವೆಷ್ಟು; | (see table below) ಶಾಲೆಯ ವಿಸ್ತೀರ್ಣ-6.5 ಎಕರೆ |
| ಈ) | ಬಿ.ಜಿ.ಎಂ.ಎಲ್ ಶಾಲೆಯು ಸ್ಥಗಿತಗೊಂಡು ದಶಕಗಳೇ ಕಳೆದರೂ, ಈವರೆವಿಗೂ ಈ ಸಂಸ್ಥೆಯನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳದಿರಲು ಕಾರಣವೇನು? (ವಿವರ ನೀಡುವುದು) | ಬಿ.ಜಿ.ಎಂ.ಎಲ್ ಸಂಸ್ಥೆ, ಕೆ.ಜಿ.ಎಫ್, ಕೋಲಾರ ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಬಿ.ಜಿ.ಎಂ.ಎಲ್ ಶಾಲೆಯು ಸರ್ಕಾರದ ಸಹಾಯಾನುದಾನಕ್ಕೆ ಒಳಪಟ್ಟ ಖಾಸಗಿ ಶಾಲೆಯಾಗಿರುತ್ತದೆ.<br><br>ಸರ್ಕಾರದ ಸಹಾಯಾನುದಾನಕ್ಕೆ ಒಳಪಟ್ಟ ಖಾಸಗಿ ಅನುದಾನಿತ ಶಾಲೆಗಳ ಆಡಳಿತ ಮಂಡಳಿಗಳು ವಿವಿಧ ಕಾರಣಗಳಿಂದ ಸರ್ಕಾರದ ವಶಕ್ಕೆ ಒಳಪಡಲು ಸ್ವಇಚ್ಛೆಯಿಂದ ಕೋರಿಕೆ ಸಲ್ಲಿಸುತ್ತಿದ್ದು, ಇಂತಹ ಶಾಲೆಗಳನ್ನು ಸರ್ಕಾರದ ವಶಕ್ಕೆ ಪಡೆಯುವ ಕುರಿತಂತೆ ಸಾಮಾನ್ಯ ನೀತಿಯೊಂದನ್ನು ರೂಪಿಸಲು (General Policy) ದಿನಾಂಕ: 14/01/2022ರಂದು ನಡೆದ ಸಭೆಯಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸೂಚಿಸಲಾಗಿತ್ತು. ದಿನಾಂಕ:13-02-2022ರಂದು ಖಾಸಗಿ ಅನುದಾನಿತ ಪ್ರೌಢಶಾಲೆಗಳನ್ನು ಸರ್ಕಾರದ ವಶಕ್ಕೆ ಪಡೆಯುವ ನಿಟ್ಟಿನಲ್ಲಿ ಸಾಧಕ ಬಾಧಕಗಳ ಕುರಿತಾದ ವರದಿ ಸ್ವೀಕೃತವಾಗಿದ್ದು, ಸದರಿ ವರದಿಯನ್ನು ಪರಿಶೀಲಿಸಲಾಗುತ್ತಿದೆ. |

Table for ಇ):

| ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ | ಪ್ರೌಢ ಶಾಲಾ ಶಿಕ್ಷಕರು ಸಂಖ್ಯೆ | ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ | ಪ್ರೌಢ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| 01 | 06 | 147 | 197 |

ಸಂಖ್ಯೆ: ಇಪಿ 47 ಎಸ್‌ಇಎಸ್ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು